## ದಿನಾಂಕ 06-11-2021 ರಂದು ಬೆಳಗ್ಗೆ 12.00 ಗಂಟೆಗೆ ವಾರ್ಡ್-88 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ : 06-11-2021 ರಂದು ಬೆಳಿಗ್ಗೆ 12:00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

| | | |
|---|---|---|
| 1. | ಶ್ರೀ.ಡಾ॥ನಾಗರಾಜ್.ಎಸ್ | -ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88. |
| 2. | ಶ್ರೀಮತಿ.ಶಿಲ್ಪಶ್ರೀ | -ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ. |
| 3. | ಶ್ರೀ.ಹನುಮಂತಪ್ಪ | - ಕಿರಿಯ ಘನತ್ಯಾಜ್ಯ ಪರಿವೀಕ್ಷಕರು |
| 4. | ಶ್ರೀಮತಿ.ಪ್ರಭಾ | - ಸ.ಅ, ಬೆಸ್ಕಾಂ |
| 5. | ಶ್ರೀ. ಶ್ರೀ.ಲೋಹಿತ್ | - ಎಇ, ಬಿಡಬ್ಲ್ಯೂಎಸ್‌ಎಸ್‌ಬಿ |
| 6. | ಶ್ರೀಮತಿ ಮಮತಾ | - ಎಇ, ಬಿಡಬ್ಲ್ಯೂಎಸ್‌ಎಸ್‌ಬಿ |
| 7. | ಶ್ರೀ.ಲಾಲ್ ಸಾಹೇಬ್ | - ಮಾರ್ಷಲ್, ಬಿಬಿಎಂಪಿ |
| 8. | ಶ್ರೀ.ಚಂದ್ರ | - ಸದಸ್ಯರು |
| 9. | ಶ್ರೀ.ಜ್ಯೋತಿರಾಮಲಿಂಗಂ | - ಸದಸ್ಯರು |
| 10. | ಶ್ರೀ.ಮಧು | - ಸದಸ್ಯರು |
| 11. | ಶ್ರೀ.ಸದಾಶಿವನ್ | - ಸದಸ್ಯರು |
| 12. | ಶ್ರೀ.ಶ್ರೀನಿವಾಸ್ | - ಸದಸ್ಯರು |
| 13. | ಶ್ರೀ.ಜಗನ್ನಾಥ್ | - ಸದಸ್ಯರು |

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ.ಶ್ರೀಲ್ಪಶ್ರೀ ರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- ಶ್ರೀ.ಸದಾಶಿವ ರವರು ಮಾತನಾಡುತ್ತಾ, 18ನೇ ಮುಖ್ಯರಸ್ತೆ, 1ನೇ 'ಸಿ' ಅಡ್ಡರಸ್ತೆಯಲ್ಲಿ ಚರಂಡಿಯನ್ನು ಸ್ವಚ್ಛತೆ ಮಾಡಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ, ಇದಕ್ಕೆ ಸಂಬಂಧಪಟ್ಟ ಸಹಾಯಕ ಅಭಿಯಂತರರು ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

- ಹಳೆ ವಿಮಾನ ನಿಲ್ದಾಣದ ರಸ್ತೆ, ಆನಂದಪುರ ಸ್ಲಂ ರಸ್ತೆ, ಜೀವನ್‌ಭೀಮಾನಗರ ಮುಖ್ಯರಸ್ತೆಗಳಲ್ಲಿ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸದರಿ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವಂತೆ ಹಾಗೂ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಿದರು.

- 13ನೇ, 13ನೇ 'ಎ' ಮುಖ್ಯರಸ್ತೆ, 14ನೇ ಮುಖ್ಯರಸ್ತೆಯ, 12ನೇ, 15ನೇ ಮುಖ್ಯರಸ್ತೆಯ ಚರಂಡಿಯಲ್ಲಿ ಹೂಳನ್ನು ತೆರವುಗೊಳಿಸಲು ಚರಂಡಿಯಲ್ಲಿ ಹೂಳನ್ನು ತೆರವುಗೊಳಿಸಲು ಹಾಗೂ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಕೋರಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರರಿಗೆ ಸೂಚಿಸಿದರು.

- ಶ್ರೀಮತಿ.ದೀಪಾ ನಾಯರ್ ರವರು ನೋಡಲ್ ಅಧಿಕಾರಿ ರವರಿಗೆ ಪತ್ರ ಬರೆದು 12ನೇ ಮುಖ್ಯರಸ್ತೆ ಸುತ್ತ ಮುತ್ತಲಿನ ರಸ್ತೆಗಳಿಗೆ, ದೇವಸ್ಥಾನಗಳ ಹತ್ತಿರ, ಶಾಲಾ ಕಾಲೇಜುಗಳ ಹತ್ತಿರ ಸಿ.ಸಿ.ಕ್ಯಾಮೇರಾ ಗಳನ್ನು ಅಳವಡಿಸಲು ಕೋರಿರುತ್ತಾರೆ. ಈ ಬಗ್ಗೆ ನೋಡಲ್ ಅಧಿಕಾರಿಯವರು ಸಂಬಂಧಪಟ್ಟ ಸಹಾಯಕ ಅಭಿಯಂತರರಿಗೆ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿದರು.

- ಬೆಸ್ಕಾಂ ರವರು ಹೆಚ್.ಎ.ಎಲ್ 2ನೇ ಹಂತದಲ್ಲಿ ರಸ್ತೆ ಬದಿಯಲ್ಲಿ ಮರಗಳನ್ನು ಟ್ರಿಮ್ಮಿಂಗ್ ಮಾಡಿ ಮರದ ರೆಂಬೆಗಳನ್ನು ತೆರವುಗೊಳಿಸದೆ ರಸ್ತೆ ಬದಿಯಲ್ಲಿ ಹಾಗೇ ಬಿಸಾಡಿ ಹೋಗಿರುತ್ತಾರೆ, ಇದನ್ನು ತೆರವುಗೊಳಿಸಲು ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಲಾಯಿತು.

- 17ನೇ ಎ ಮುಖ್ಯರಸ್ತೆ, ಹೆಚ್.ಎ.ಎಲ್ 2ನೇ ಹಂತದ 5ನೇ ಎ,ಬಿ,ಸಿ,ಡಿ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸದರಿ ರಸ್ತೆಯ ನಿವಾಸಿಗಳು ಕೋರಿದರು. ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಲಾಯಿತು.

- 12ನೇ ಮುಖ್ಯರಸ್ತೆ ಹಾಗೂ ಜಲಪಾನ್ ಹೋಟೆಲ್ ಹತ್ತಿರ ರಸ್ತೆಯಲ್ಲಿ ಅನಧಿಕೃತವಾಗಿ ವಾಹನ ನಿಲುಗಡೆ ಮಾಡುತ್ತಿದ್ದು, ಸದರಿ ಸ್ಥಳಗಳಲ್ಲಿ ನೋ ಪಾರ್ಕಿಂಗ್ ಬೋರ್ಡ್‌ನ್ನು ಅಳವಡಿಸಲು ಸಂಚಾರಿ ಪೊಲೀಸ್ ಇಲಾಖೆಗೆ ತಿಳಿಸಲಾಯಿತು.

- 2ನೇ ಅಡ್ಡರಸ್ತೆಯಲ್ಲಿರುವ ಜೆ.ಬಿ ಸೆಕ್ರೇಡ್ ಹಾರ್ಟ್ ಸ್ಕೂಲ್ ಹತ್ತಿರ ಹಾಕುತ್ತಿರುವ ಕಸವನ್ನು ತೆವುಗೊಳಿಸಲು, ಸದರಿ ಸ್ಥಳವನ್ನು ಸ್ವಚ್ಛಗೊಳಿಸಿ ಬ್ಯೂಟಿಫಿಕೇಷನ್ ಮಾಡಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೂಡಲೇ ಅವಶ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

- ಮಳೆಗಾಲದ ಸಂದರ್ಭದಲ್ಲಿ ಮಳೆ ನೀರು ಸರಾಗವಾಗಿ ಹರಿಯಲು, ಮಳೆನೀರುಗಾಲುವೆಯಲ್ಲಿ ಹೂಳನ್ನು ತೆರವುಗೊಳಿಸಲು ಸಂಬಂಧಪಟ್ಟ ಮಳೆನೀರುಗಾಲುವೆ ವಿಭಾಗದ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ-88**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ 88**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 88**